Date : 26-9-2015

# ಜಾಗತಿಕ ಗೋಧಿ ದಾಸ್ತಾನು ದಾಖಲೆ ಹೆಚ್ಚಳ

ಈಗಿನ ಉತ್ಪಾದನಾ ಸೀಜನ್ ಅಂತ್ಯದ ವೇಳೆಗೆ ಜಾಗತಿಕ ಗೋಧಿ ದಾಸ್ತಾನು ಸರ್ವಕಾಲಿಕ ದಾಖಲೆ ಹೆಚ್ಚಳ ಕಾಣಬಹುದೆನ್ನಲಾಗಿದೆ. ಜಾಗತಿಕ ಕಟಾವಿನ ಹೆಚ್ಚು ನಿಖರ ಅಂದಾಜಿನಂತೆ ಹೆಚ್ಚಿನ ಪೂರೈಕೆ ಜಾನುವಾರುಗಳ ಮೇವಿಗೆ ಬಳಕೆಯಾಗಬಹುದೆನ್ನಲಾಗಿದೆ. ಅಂತರಾಷ್ಟ್ರೀಯ ಗ್ರೈನ್ಸ್ ಕೌನ್ಸಿಲ್ ತನ್ನ ಮಾಸಿಕ ವರದಿಯಲ್ಲಿ 7 ಮಿಲಿಯನ್ ಟನ್‌ಗಳ ಹೆಚ್ಚಳ ಹಾಗೂ 2015–16ರ ಒಟ್ಟು ಸೀಜನ್‌ನ 2011 ಮಿಲಿಯನ್ ಟನ್‌ಗಳ ಒಟ್ಟು ದಾಸ್ತಾನು ಹೆಚ್ಚಳವಾಗಬಹುದೆಂದು ಹೇಳಿದೆ. 2015–16ರ ಸೀಜನ್‌ನ ಜಾಗತಿಕ ಗೋಧಿ ಒಟ್ಟು ಉತ್ಪಾದನೆ 727 ಮಿಲಿಯನ್ ಟನ್‌ಗಳಾಗಬಹುದೆಂದು ಅದು ಪುನರಂದಾಜಿಸಿದೆ. ಈ ವರ್ಷದ ಕಟಾವು ಮೂರನೇ ಅಧಿಕ ಉತ್ಪಾದನೆಯ ಸೀಜನ್ ಆಗಲಿದೆ.

ಜಾಗತಿಕ ಜೋಳದ ಉತ್ಪಾದನೆ ಕಡಿಮೆಯಾಗಿ ಪೂರೈಕೆ ಬಿಗುವಿರಬಹುದಾದ್ದರಿಂದ ಪರ್ಯಾಯ ಧಾನ್ಯದ ಬಳಕೆಯಲ್ಲಿ ಆಸಕ್ತಿವಹಿಸಬಹುದಾಗಿದ್ದು, ಗೋಧಿ ಇದಕ್ಕೆ ಉತ್ತಮ ಪರ್ಯಾಯ ಆಯ್ಕೆಯಾಗಬಹುದೆನ್ನಲಾಗಿದೆ. ಉತ್ತಮ ಪೂರೈಕೆಯ ಭವಿಷ್ಯದ ಹೊರತಾಗಿಯೂ ಜಾಗತಿಕ ಗೋಧಿ ದರ ಹಿಂದಿನ ತಿಂಗಳಿಂದ 3.1 ಶೇಕಡಾ ಹೆಚ್ಚಳ ಕಂಡಿದೆಯೆನ್ನಲಾಗಿದೆ.